


## ಅದ್ದೂರಿಯೊಂದಿಗೆ ಜವಾಬ್ದಾರಿಯಿರಲಿ

'ಆಹಾ ಅದ್ದೂರಿ ಮದುವೆ' (ಏ. 23, ಪೂರ್ವಿ) ಮುಖಪುಟ ಲೇಖನ, ಇಂದಿನ ಮದುವೆಗಳ ಬಗ್ಗೆ ಅಚ್ಚುಕಟ್ಟಾದ ವಿಶ್ಲೇಷಣೆಯಂತಿದೆ. ವಿಷಾದದ ಸಂಗತಿ ಏನೆಂದರೆ, ಇಂದಿನ ಮದುವೆಗಳು ಅದ್ದೂರಿ ಆಗುವ ಭರದಲ್ಲಿ ಪ್ರಕೃತಿಗೆ ಮಾರಕವೂ ಆಗುತ್ತಿದೆ. ಸ್ಟೀಲ್ ಲೋಟಗಳ ಜಾಗ ಪ್ಲಾಸ್ಟಿಕ್ ಬಾಟಲ್ ಆಕ್ರಮಿಸಿದೆ. ಬಾಳೆಎಲೆ ಒರೆಸಲು ಪ್ರಕೃತಿಗೆ ಮಾರಕವಾದ ಟಿಶ್ಯೂಗಳು. ಪ್ಲಾಸ್ಟಿಕ್ ಬಟ್ಟಲುಗಳು, ಪ್ಲಾಸ್ಟಿಕ್ ತಟ್ಟೆಗಳು. ಹೆಚ್ಚು ಹೆಚ್ಚು ಆಹಾರ ಪದಾರ್ಥಗಳನ್ನು ಮಾಡುವುದರಿಂದ ಆಹಾರ ತ್ಯಾಜ್ಯವೂ ಹೆಚ್ಚು. ಜೀವನದ ಪ್ರಮುಖ ಮೈಲಿಗಲ್ಲಾದ ಮದುವೆಯನ್ನು ಪ್ರಕೃತಿಗೆ ಪೂರಕವಾಗಿ ಮಾಡುವುದು ನಮ್ಮ ಜವಾಬ್ದಾರಿಯಲ್ಲವೇ?


—ಶಾಲಿನಿ ಮನೋಹರ್, ಬೆಂಗಳೂರು

## ಸ್ಥಿತಿಗತಿಗನುಗುಣವಾಗಿ ಮದುವೆ

ಮದುವೆ ಸೀಸನ್‌ನಲ್ಲಿ ಪ್ರಕಟವಾದ ಬರಹ ಸಕಾಲಿಕ ಎನಿಸಿತು. ಸಮಾಜದಲ್ಲಿರುವ ಪ್ರತಿಷ್ಠಿತರ ಮನೆಗಳ ಅದ್ದೂರಿ ಮದುವೆಗಳು, ಸೆಲೆಬ್ರಿಟಿಗಳ ಮದುವೆಗಳು ಆಶ್ಚರ್ಯವೆನಿಸುವುದಿಲ್ಲ. (ಉಳ್ಳವರು ಶಿವಾಲಯ ಮಾಡುವರು) ಮದುವೆಗೆ ಹೆಣ್ಣು ಸಿಗುವುದು ದುಸ್ತರ ಆಗಿರುವಾಗ ವರದಕ್ಷಿಣೆ ಸಮಸ್ಯೆಯೂ ಕಡಿಮೆಯಾಗಿದೆ. ಬದಲಿಗೆ ಗಂಡು, ಹೆಣ್ಣಿನ ಕಡೆಯವರು ಮದುವೆ ಖರ್ಚನ್ನು ಸಮಾನವಾಗಿ ಹಂಚಿಕೊಳ್ಳುವ ಪರಿಸ್ಥಿತಿ ಇದೆ. ಅವರವರ ಸ್ಥಿತಿ ಗತಿಗನುಗುಣವಾಗಿ ಮದುವೆ ಸಮಾರಂಭಗಳು ನಡೆದರೆ ತಪ್ಪೇನೂ ಇಲ್ಲ. ಜೀವನದಲ್ಲಿ ಒಮ್ಮೆ ನಡೆಯುವ ಮದುವೆ ಎಲ್ಲರ ಸಮ್ಮುಖದಲ್ಲಿ ನಡೆಯಬೇಕು ಎನ್ನುವುದೂ ಹಲವರ ಆಸೆ.

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ಸರಳವಾದ ಸುಂದರ ಕಥೆ



'ಹುಡುಕಾಟ' (ಏ. 23, ಅಮಚವಾಡಿ ಹರಿದಾಸ) ಕಥೆ ಚೆನ್ನಾಗಿದೆ. 'ಊರಿಗೆ ಉಪಕಾರಿ ಮನೆಗೆ ಮಾರಿ' ಅನ್ನುವಂತೆ ನಡೆದುಕೊಳ್ಳುವ ಹಾಗೂ ಪುರುಷ ಪ್ರಧಾನ ವ್ಯವಸ್ಥೆಯ ಭಾಗವಾದ ಅಪ್ಪನ ನಡವಳಿಕೆಯ ಕಥೆಯ ನಡುವೆಯೂ, ಅವನ ನಿಧನದ ನಂತರ, ಕುಟುಂಬಕ್ಕೆ ಆಸರೆಯಾಗಿ ನಿಂತು, ಇನ್ನಿಲ್ಲದ ಹುಡುಕಾಟದ ನಡುವೆಯೂ ಮಕ್ಕಳನ್ನು ದಡ ಸೇರಿಸಿದ ಅಮ್ಮನ ಕಥೆ ನಿಜಕ್ಕೂ ಖುಷಿಕೊಟ್ಟಿತು. ಬೇಜಾರಿಲ್ಲದೆ, ವಿಷಯಾಂತರ ಮಾಡದೇ, ವಿಚಲಿತರಾಗದಂತೆ ಸರಳವಾಗಿ ಓದಿಸಿಕೊಂಡು ಹೋದ ಕಥೆ ಇಷ್ಟವಾಯಿತು.

—ವಿ.ಆರ್. ಮುರಲೀಧರ್

## ಸುಳಿಸುಳಿಯುವ ನೆನಪು

ಸಂಸಾರಕ್ಕೆ ಬಿದ್ದ ಪ್ರತಿ ಗಂಡಸಿಗೂ ಅಪ್ಪ ಅಮ್ಮನ ನೆನಪು ಕಟ್ಟಿಟ್ಟ ಬುತ್ತಿ. ಹರಿದಾಸರು ಸುಳಿಸುಳಿದು ಹೋಗುವ ಅಪ್ಪನ ನೆನಪುಗಳನ್ನು ಥಳುಕು ಬಳುಕಿಲ್ಲದೆ ಅಚ್ಚುಕಟ್ಟಾಗಿ ಹೇಳಿದ್ದಾರೆ. ಅಪ್ಪನ ಅವಗುಣಗಳನ್ನು ಕೂಡಾ ನೆನೆಸಿಕೊಳ್ಳುತ್ತಾ, ನಾಲ್ಕು ಜನರ ಕಷ್ಟಸುಖಗಳಲ್ಲಿ ಭಾಗಿಯಾಗುವ ಅಪ್ಪನ ಗುಣದಲ್ಲಿ ತಾನೂ ಬೆರೆತು ಹೋಗುತ್ತಿರುವುದು ಅರಿವಿಗೆ ಬಂದೊಡನೆ, ಕಥೆಯ ಉಸಿರು ಹರಳುಗಟ್ಟುತ್ತದೆ. ಇಂತಹ ಕಥೆಯಲ್ಲದ ನೆನಪನ್ನು ನಾನೇ ಬರೆಯಬೇಕಿತ್ತು ಎನ್ನಿಸಿತು.

—ಮುರಳೀಧರ್ ಕುಮಾರ್, ಬೆಂಗಳೂರು

## ಸ್ವಾನುಭಾವದ ವಚನ ವಿಶ್ಲೇಷಣೆ

'ತನ್ನ ಬಣ್ಣಿಸಬೇಕು' (ಏ. 23, ಡಾ. ಸುಂಕಂ ಗೋವರ್ಧನ) ಪ್ರಬಂಧ ಚೆನ್ನಾಗಿದೆ. ಬಸವಣ್ಣನವರ 'ಕಳಬೇಡ, ಕೊಲಬೇಡ...' ವಚನದ ಸಾಲುಗಳು ಸೊಗಸಾಗಿ ಪ್ರಬಂಧದ ಉದ್ದಕ್ಕೂ ತಿಳಿಹಾಸ್ಯ ಸಮೇತ ಮೂಡಿಬಂದಿದೆ. ಸ್ವಾನುಭಾವದ ವಚನ ವಿಶ್ಲೇಷಣೆ ಸೊಗಸಾಗಿದೆ.


—ಮಲ್ಲಿಕಾರ್ಜುನ ಮಲ್ಲೇಶಣ್ಣ

## ಸಮರ್ಪಕ ಪ್ರಬಂಧ

ಇಂದಿನ ಕಾಲಮಾನಕ್ಕೆ ಸಮರ್ಪಕವಾದ ಪ್ರಬಂಧ. ಯಾವುದೇ ಉತ್ತಮ ವಸ್ತು, ವ್ಯಕ್ತಿ ಅಥವಾ ವಿಷಯ ಬಣ್ಣನೆಗೊಂಡು ಪ್ರಚಾರ ಇಲ್ಲದಿದ್ದರೆ ಅದು ಮೂಲೆಗುಂಪಾಗುವ ಸಾಧ್ಯತೆ ಬಹಳ. ಹಾಗೆಯೇ ಬಣ್ಣನೆಗೊಂಡು ಪ್ರಚಾರಕ್ಕೆ ಸಿಕ್ಕ ಕಳಪೆಗೂ ವಿಜೃಂಭಿಸುವ ಅವಕಾಶವಿದೆ!

—ವಸುಧಾ ಜೈಶಂಕರ್, ಬೆಂಗಳೂರು

## ವೈಜ್ಞಾನಿಕ ಪರಿಹಾರ ಸಿಗಲಿ



'ಗಜಗರ್ಭಕ್ಕೆ ತಡೆ?' (ಏ. 23, ಯತೀಶ್ ಕುಮಾರ್ ಜಿ.ಡಿ.) ಲೇಖನ ಮಾಹಿತಿಪೂರ್ಣವಾಗಿದೆ. ಕಾಡಾನೆಗಳು ಕಾರಣಾಂತರದಿಂದ ಜನವಸತಿ ಪ್ರದೇಶಕ್ಕೆ ಲಗ್ಗೆ ಇಡುತ್ತಿದ್ದು, ಈ ಸಮಸ್ಯೆಗೆ ಜನರು ಹಲವಾರು ಪರಿಹಾರಗಳನ್ನು ತಮ್ಮ ಆಲೋಚನೆಗೆ ತಕ್ಕಂತೆ ನೀಡುತ್ತಿರುವುದು ವಾಸ್ತವ. ಈ ಸಮಸ್ಯೆಗೆ ಮೂಲ ಕಾರಣವನ್ನು ಅಧ್ಯಯನ ಮಾಡುವುದು ಅತ್ಯಗತ್ಯ. ಅದೇ ರೀತಿ ವೈಜ್ಞಾನಿಕ ಪರಿಹಾರ ಕಂಡುಕೊಳ್ಳುವುದು ಸೂಕ್ತ.

—ರಾಜೀವ್ ಎನ್. ಮಾಗಲ್, ಹಾಸನ

## ಮೆಚ್ಚಬೇಕಾದ ವಿಷಯ

'ಸತ್ಯ ನುಡಿದ ರೇವತಿ' (ಏ. 23, ರಾಹುಲ ಬೆಳಗಲಿ) 'ಸೆಲೆಬ್ರಿಟಿ' ಲೇಖನದಲ್ಲಿ ತಿಳಿಸಿದಂತೆ ರೇವತಿಯವರ ಧೈರ್ಯ, ಸಾಹಸ ಮೆಚ್ಚುವಂಥದ್ದು.

—ಬಿ.ಕೆ. ಪ್ರಭುದೇವರಾಜ ಅರಸ್, ಮೈಸೂರು

## ಕುಂದಗನ್ನಡದ ಸೊಬಗು

'ನಮ್ಮೂರ ಭಾಷಿಯೂ ವಿಶಿಷ್ಟ ಹವಾಮಾನವು' (ಏ. 23, ಬಿ. ಶೋಭಾ ಅರಸ) 'ಚೆನ್ನುಡಿ'ಯಲ್ಲಿ ಕುಂದಗನ್ನಡದ ಸೊಬಗಿನ ಭಾಷೆ ಓದಿ ತುಂಬಾ ಖುಷಿಯಾಯಿತು.

—ನಾಗರಾಜ ಕೃಷ್ಣರಾವ್

## ಪ್ರೇರೇಪಿಸುವ ಪ್ರವಾಸ




'ಪ್ರತಿಮೆಗಳ ನಗರ ಬುಡಾಪೆಸ್ಟ್' (ಏ. 23, ಡಿ.ಜಿ. ಮಲ್ಲಿಕಾರ್ಜುನ) ನಮ್ಮನ್ನು ಬುಡಾಪೆಸ್ಟ್ ನಗರಕ್ಕೇ ಕರೆದುಕೊಂಡು ಹೋಯಿತು. ಪ್ರತಿ ಶಿಲ್ಪದ ಬಗ್ಗೆ ಲೇಖಕರ ವಿವರಣೆ ಹಾಗೂ ಆ ಭಾವಚಿತ್ರಗಳು ಆ ನಗರಕ್ಕೆ ಹೋಗಲು ಪ್ರೇರೇಪಿಸಿತು.

—ಮಾಧವ ಉದ್ಯಾವರ, ಮೈಸೂರು

## ಕಥಾ ಸ್ಪರ್ಧೆಗೆ ಆಹ್ವಾನ

'ಕೃಷಿ ಸಮಯ' ತನ್ನ 15ನೇ ವಾರ್ಷಿಕೋತ್ಸವದ ಅಂಗವಾಗಿ ಕಥಾ ಸ್ಪರ್ಧೆ ಏರ್ಪಡಿಸಿದೆ. ಸ್ಪರ್ಧೆಗೆ ಕಳುಹಿಸುವ ಕಥೆ ಎಲ್ಲಿಯೂ ಪ್ರಕಟಗೊಂಡಿರಬಾರದು. ಪದಮಿತಿ ಗರಿಷ್ಠ 2500 ಶಬ್ದಗಳು. ಮುದ್ರಿತ ಇಲ್ಲವೇ ಕೈ ಬರಹವನ್ನು ಪರಿಗಣಿಸುವುದಿಲ್ಲ. ಮೊದಲನೇ ಬಹುಮಾನ– 5000 ರೂ, ಎರಡನೇ ಬಹುಮಾನ– 3000 ರೂ, ಮೂರನೇ ಬಹುಮಾನ– 2000 ರೂ. ಮೇ 30 ಕೊನೆಯ ದಿನ. ಇಮೇಲ್ ವಿಳಾಸ: nagesh.kalenahalli@gmail.com

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in